ದಿನಾಂಕ 31-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 2 ನೇ ಎದುರುದಾರರ ಪರವಾಗಿ ಮೋಡಮ್ ಪಿ. ಎಸ್ ವಕೀಲರವರಿಂದಃ

ಅಪಘಾತವಾಗಿದೆ ಎಂದು ಹೇಳುವ ಸಮಯದಲ್ಲಿ ನೀವು ಇಲ್ಲಿ ಇರುತ್ತೀರಿ ಎಂದರೆ ಮನೆಯಲ್ಲಿ ಇದ್ದೆನು. ಅಪಘಾತವನ್ನು ನೀವು ಕಣ್ಣಾರೆ ನೋಡಿಲ್ಲದೇ ಇರುವುದರಿಂದ ಅಪಘಾತವು ಯಾರ ತಪ್ಪಿನಿಂದ ಮತ್ತು ಹೇಗೆ ಆಗಿರುತ್ತದೆ ಎಂದು ನಿಮಗೆ ಹೇಳಲು ಆಗುವುದಿಲ್ಲ ಎಂದರೆ ನಮ್ಮ ಮನೆಯ ಪಕ್ಕದವರು ಕರೆ ಮಾಡಿ ಅಪಘಾತವು ಹೇಗೆ ಆಗಿರುತ್ತದೆ ಎಂದು ತಿಳಿಸಿದರು. ಅಪಘಾತವಾಗಿದೆ ಎಂದು ಹೇಳುವ ಸಮಯದಲ್ಲಿ ನಿಮ್ಮ ಮಗನು ಚಾಲನೆ ಮಾಡುತ್ತಿದ್ದ ದ್ವಿ ಚಕ್ರ ವಾಹನವು ಯಾರಿಗೆ ಸೇರಿದ್ದು ಎಂದರೆ ನನ್ನ ಮಗನಿಗೆ ಸೇರಿದ್ದಾಗಿರುತ್ತದೆ. ನಿಮ್ಮ ಮಗನಿಗೆ ದ್ವಿ ಚಕ್ರ ವಾಹನವನ್ನು ಚಾಲನೆ ಮಾಡಲು ಚಾಲನಾ ಪರವಾನಿಗೆ ಇತ್ತೇ ಎಂದರೆ ಇತ್ತು. ನಿಪಿ 16 ದಾಖಲೆಯನ್ನು ನೀವು ಈ ಅರ್ಜಿಯ ಉದ್ದೇಶದಿಂದ ಸೃಷ್ಟಿಮಾಡಿಕೊಂಡು ತಂದು ಹಾಜರು ಮಾಡಿರುತ್ತೀರಿ ಎಂದರೆ ಸರಿಯಲ್ಲ.

ನಿಮ್ಮ ಮಗನಿಗೆ ಅಪಘಾತವಾಗಿದೆ ಎಂದು ತಿಳಿಸಿದವರು ನಿಮಗೆ ಸಂಬಂಧಿಕರೇ ಎಂದರೆ ಹೌದು. ಅಪಘಾತ ಕ್ಕೆ ಸಂಬಂಧಿಸಿದಂತೆ ದೂರನ್ನು ಯಾರು ನೀಡಿದ್ದಾರೆ ಎಂದರೆ ನನ್ನ ಮಗನ ಸ್ನೇಹಿತರು ಹಾಗೂ ಅಪಘಾತವನ್ನು ನೋಡಿದವರು ನೀಡಿದ್ದಾರೆ ಅವರ ಹೆಸರು ನನಗೆ ಗೊತ್ತಿಲ್ಲ.

ಅಪಘಾತವಾಗಿದೆ ಎಂದು ಹೇಳುವ ಸಮಯದಲ್ಲಿ ನಿಮ್ಮ ಮಗನು ಕೆಲಸಕ್ಕೆ ಹೋಗುತ್ತಿದ್ದರೇ ಎಂದರೆ ಇಲ್ಲ ಎಂದು ಹೇಳಿ ನಂತರ ಹೌದು ಎಂದು ಹೇಳಿರುತ್ತಾರೆ. ಅಪಘಾತ ವಾಗಿದೆ ಎಂದು ಹೇಳುವ ಕಾಲದಲ್ಲಿ ನಿಮ್ಮ ಮಗ ಏನು ಕೆಲಸ ಮಾಡುತ್ತಿದದರು ಎಂದರೆ ಸೆಂಟ್ರಿಂಗ್ ಕೆಲಸ ಮಾಡುತ್ತಿದ್ದರು. ನಿಮ್ಮ ಮಗನಿಗೆ ಎಷ್ಟು ಆದಾಯ ಇತ್ತು ಎಂದರೆ ವಾರಕ್ಕೆ 7 ಸಾವಿರ ರೂಪಾಯಿ ಆದಾಯ ಇತ್ತು.

ನಿಮ್ಮ ಮಗನಿಗೆ ಸೆಂಟ್ರಿಂಗ್ ಕೆಲಸವು ದಿನನಿತ್ಯ ಇರಲಿಲ್ಲ ಅವರು ಕರೆದಾಗ ಕೆಲಸವಿದ್ದಾಗ ಮಾತ್ರ ಹೋಗುತ್ತಿದ್ದರು ಎಂದರೆ ಸರಿಯಲ್ಲ. ನಿಮ್ಮ ಮಗನಿಗೆ ಸಂಬಳವನ್ನು ಯಾವ ರೀತಿಯಲ್ಲಿ ಕೊಡುತ್ತಿದ್ದರು ಎಂದರೆ ನಗದಾಗಿ ಕೊಡುತ್ತಿದ್ದರು. ಅಪಘಾತವಾಗಿದೆ ಎಂದು ಹೇಳುವ ಸಮಯದಲ್ಲಿ ನಿಮ್ಮ ಮಗನಿಗೆ ನೀವು ಹೇಳುವ ರೀತಿಯ ಕೆಲಸ ಮತ್ತು ಅದಾಯ ಇರಲಿಲ್ಲ ಎಂದರೆ ಸರಿಯಲ್ಲ.

ಅಪಘಾತವಾಗಿದೆ ಎಂದು ಹೇಳುವ ಕಾಲದಲ್ಲಿ ನಿಮ್ಮ ಮಗನ ವಯಸ್ಸು 28 ಎಂದು ತೋರಿಸಲು ಆಧಾರ್ ಕಾರ್ಡ್ ನ್ನು ಹೊರತು ಪಡಿಸಿ ಬೇರೆ ದಾಖಲೆಯನ್ನು ಹಾಜರು ಮಾಡಿರುವುದಿಲ್ಲ ಎಂದರೆ ಶಾಲಾ ದಾಖಲಾತಿಯನ್ನು ಹಾಜರು ಮಾಡಿರುತ್ತೇನೆ. ನಿಪಿ 15 ದಾಖಲೆಯನ್ನು ಈ ಕೇಸಿಗಾಗಿ ಸೃಷ್ಟಿ ಮಾಡಿ ಹಾಜರು ಪಡಿಸಿರುತ್ತೀರಿ ಎಂದರೆ ಸರಿಯಲ್ಲ. ಅಪಘಾತವಾಗಿದೆ ಎಂದು ಹೇಳುವ ಕಾಲದಲ್ಲಿ ನಿಮ್ಮ ಮಗನ ವಯಸ್ಸು 28 ಕ್ಕಿಂತಲೂ ಹೆಚ್ಚಿಗೆ ಆಗಿತ್ತು ಎಂದರೆ ಸರಿಯಲ್ಲ. ನಿಮ್ಮ ಮಗನಿಗೆ ಆಗಿದೆ ಎಂದು ಹೇಳುವ ಅಪಘಾತದಿಂದ ಯಾವುದೇ ಅದಾಯ ನಷ್ಟ ನಿಮಗೆ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ನೀವು ಕೆಲಸಕ್ಕೆ ಹೋಗುತ್ತಿದ್ದೀರಾ ಎಂದರೆ ಇಲ್ಲ. ನಿಮ್ಮ ಗಂಡ ಜೀವಂತ ಇದ್ದಾರೆಯೇ ಎಂದರೆ ಅವರು 5 ವರುಷಗಳ ಹಿಂದೆ ತೀರಿಕೊಂಡಿದ್ದಾರೆ. 2 ನೇ ಅರ್ಜಿದಾರರು ಎಲ್ಲಿ ಇದ್ದಾರೆ ಎಂದರೆ ಬೆಂಗಳೂರಿನಲ್ಲಿ ಅವರ ಗಂಡನ ಮನೆಯಲ್ಲಿ ಇದ್ದಾರೆ . 2 ನೇ ಅರ್ಜಿದಾರರು ನಿಮ್ಮ ನೈಸರ್ಗಿಕ ಮಗಳೇ ಎಂದರೆ ಹೌದು. 2 ನೇ ಅರ್ಜಿದಾರರು ಎಲ್ಲಿ ಜನಿಸಿದರು ಎಂದರೆ ಆಸ್ಪತ್ರೆ ಯಲ್ಲಿ ಜನಿಸಿದರು. 2 ನೇ ಅರ್ಜಿದಾರರು ನಿಮ್ಮ ಮಗಳು ಎಂದು ತೋರಿಸಲು ಯಾವ ದಾಖಲೆಯನ್ನು ಸಹ ಹಾಜರು ಮಾಡಿರುವುದಿಲ್ಲ ಎಂದರೆ ಶಾಲಾ ದಾಖಲಾತಿಯನ್ನು ಹಾಜರು ಮಾಡಿರುತ್ತೇನೆ. 2 ನೇ ಅರ್ಜಿದಾರರ ಜನನ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಬಹುದೇ ಎಂದರೆ ಸಲ್ಲಿಸಬಹುದು.

2 ನೇ ಅರ್ಜಿದಾರರು ನಿಮ್ಮ ಮಗಳು ಆಗಿರುವುದಿಲ್ಲ ಪರಿಹಾರವನ್ನು ಪಡೆಯುವ ಉದ್ದೇಶದಿಂದ 3 ನೇ ವ್ಯಕ್ತಿಯನ್ನು ನಿಮ್ಮ ಮಗಳು ಎಂದು ಅರ್ಜಿಯಲ್ಲಿ ಕಾಣಿಸಿರುತ್ತೀರ ಎಂದರೆ ಸರಿಯಲ್ಲ. ನಿಮ್ಮ ಮಗನು ವಾಹನಗಳು ಬರುವುದಿನ್ನು ಗುವನಿಸಿಸದೆ ನಿರ್ಲಕ್ಯತೆಯಿಂದ ವಾಹನವನ್ನು ಚಾಲನೆ ಮಾಡಿದ್ದು ಅವರ ತಪ್ಪಿ ನಿಂದಲೇ ಅಪಘಾತವು ಆಗಿರುದರಿಂದ 2 ನೇ ಎದುರುದಾರರು ಪರಿಹಾರ ತುಂಬಿ ಕೊಡಲು ಬದ್ದರಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ 1 ನೇ ಎದುರುದಾರರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ.ಮತ್ತು ಎಂ.ಎ.ಸಿ.ಟಿ.　ಉಡುಪಿ.